# ಪ್ರಸ್ತುತ ಶಿಕ್ಷಣದಲ್ಲಿ 'ಗುರುಕುಲ' ಶಿಕ್ಷಣ ಪದ್ಧತಿಯ ಅವಶ್ಯಕತೆ

**ನವೀನ್ ಕುಮಾರ್ ಆರ್.ಎ.[1] & ಮಂಜುನಾಥ[2]**

[1]ಸಂಶೋಧನಾ ವಿದ್ಯಾರ್ಥಿ, ಶ್ರೀ ಸತ್ಯಸಾಯಿ ಮಾನವ ಅಭ್ಯುದಯ ವಿಶ್ವವಿದ್ಯಾಲಯ, ನವನಿಹಾಳ, ಕಲಬುರ್ಗಿ ಜಿಲ್ಲೆ.

[2]ಮುಖ್ಯಸ್ಥರು, ಭಾಷಾ ವಿಭಾಗ, ಶ್ರೀ ಸತ್ಯ ಸಾಯಿ ಮಾನವ ಅಭ್ಯುದಯ ವಿಶ್ವವಿದ್ಯಾಲಯ, ನವನಿಹಾಳ ಗ್ರಾಮ, ಕಲಬುರ್ಗಿ ಜಿಲ್ಲೆ.

DOI: https://doi.org/10.5281/zenodo.17773539

## ABSTRACT:

ಭಾರತದ ಪುರಾತನ ಗುರುಕುಲ ಶಿಕ್ಷಣ ಪದ್ಧತಿಯು ಸಾಮಾಜಿಕ ಸ್ಥಾನಮಾನವನ್ನು ಲೆಕ್ಕಿಸದೆ ಎಲ್ಲ ವಿದ್ಯಾರ್ಥಿಗಳಿಗೆ ಗುರುಗಳ ಆಶ್ರಮದಲ್ಲಿ ವಾಸಿಸಿ, ಸಮಗ್ರ ಶಿಕ್ಷಣವನ್ನು ನೀಡುವ ಒಂದು ಅನನ್ಯ ವ್ಯವಸ್ಥೆಯಾಗಿತ್ತು. ಇದು ರಾಜಕೀಯ ಹಸ್ತಕ್ಷೇಪದಿಂದ ಮುಕ್ತವಾಗಿದ್ದು, ಗುರುಗಳ ನಿರ್ಧಾರವೇ ಅಂತಿಮವಾಗಿತ್ತು. ಗುರುಕುಲವು ವಿದ್ಯಾರ್ಥಿಗಳಿಗೆ ಸಾಮಾಜಿಕ, ರಾಜಕೀಯ, ಆಧ್ಯಾತ್ಮಿಕ, ನೈತಿಕ, ಬೌದ್ಧಿಕ ಮತ್ತು ಶಾರೀರಿಕ ಬೆಳವಣಿಗೆಯನ್ನು ಒದಗಿಸುವ ಸಮಗ್ರ ಶಿಕ್ಷಣವನ್ನು ನೀಡುತ್ತಿತ್ತು. ಇಲ್ಲಿ ಶಿಕ್ಷಣವು ಸಂಪೂರ್ಣ ಉಚಿತವಾಗಿದ್ದು, ವಿದ್ಯೆ ಮುಗಿದ ನಂತರ ವಿದ್ಯಾರ್ಥಿಗಳು ತಮ್ಮ ಸಾಮರ್ಥ್ಯಕ್ಕೆ ಅನುಗುಣವಾಗಿ ಗುರುದಕ್ಷಿಣೆಯನ್ನು (ಧಾನ್ಯ, ವಸ್ತು, ಅಥವಾ ಚಿನ್ನ) ನೀಡುತ್ತಿದ್ದರು. ಗುರು–ಶಿಷ್ಯರ ಸಂಬಂಧವು ಕೇವಲ ಬೋಧನೆಗೆ ಸೀಮಿತವಾಗಿರದೆ, ಆಧ್ಯಾತ್ಮಿಕ ಮತ್ತು ನೈತಿಕ ಮಾರ್ಗದರ್ಶನವನ್ನು ಒಳಗೊಂಡಿದ್ದು, ಗುರುಗಳನ್ನು ದೇವರ ಪ್ರತಿನಿಧಿಗಳೆಂದು ಗೌರವಿಸಲಾಗುತ್ತಿತ್ತು. ದ್ರೋಣಾಚಾರ್ಯ–ಅರ್ಜುನ, ಸಾಂದೀಪನಿ–ಶ್ರೀಕೃಷ್ಣ ಮುಂತಾದವರ ಉದಾಹರಣೆಗಳು ಈ ಪರಂಪರೆಯ ಮಹತ್ವವನ್ನು ಎತ್ತಿ ತೋರಿಸುತ್ತವೆ. ಆದರೆ, ಇಂದಿನ ಆಧುನಿಕ ಶಿಕ್ಷಣ ವ್ಯವಸ್ಥೆಯು ಹೆಚ್ಚಾಗಿ ಉದ್ಯೋಗ ಕೇಂದ್ರಿತವಾಗಿ, ಪ್ರವೇಶ ಶುಲ್ಕ, ಪರೀಕ್ಷಾ ಒತ್ತಡ ಮತ್ತು ತೀವ್ರ ಸ್ಪರ್ಧೆಗೆ ಒತ್ತು ನೀಡುತ್ತಿದೆ. ಇದು ಮಕ್ಕಳಲ್ಲಿ ಮಾನಸಿಕ ಒತ್ತಡ, ಆತಂಕ ಮತ್ತು ಆತ್ಮವಿಶ್ವಾಸದ ಕೊರತೆಯನ್ನು ಸೃಷ್ಟಿಸುತ್ತಿದೆ. ಈ ಹಿನ್ನೆಲೆಯಲ್ಲಿ, ಪ್ರಸ್ತುತ ಶಿಕ್ಷಣ ವ್ಯವಸ್ಥೆಯಲ್ಲಿ ಜೀವನ ಮೌಲ್ಯಗಳು, ನೈತಿಕತೆ, ಧ್ಯಾನ, ಮತ್ತು ಪ್ರಕೃತಿಯೊಂದಿಗೆ ಕಲಿಕೆಯಂತಹ ಗುರುಕುಲ ಪದ್ಧತಿಯ ಅಂಶಗಳನ್ನು ಅಳವಡಿಸಿಕೊಳ್ಳುವುದು ಅತ್ಯಂತ ಅಗತ್ಯವಾಗಿದೆ. ಇದು ಮಕ್ಕಳನ್ನು ಮಾನಸಿಕ ಒತ್ತಡದಿಂದ ಹೊರತಂದು, ಅವರನ್ನು ಸಂತೋಷ ಮತ್ತು ಜ್ಞಾನಯುತವಾದ ಸಮಗ್ರ ವ್ಯಕ್ತಿತ್ವಗಳನ್ನಾಗಿ ರೂಪಿಸಲು ನೆರವಾಗುತ್ತದೆ.

## KEYWORDS:

ಗುರುಕುಲ, ಗುರುದಕ್ಷಿಣೆ, ಗುರು–ಶಿಷ್ಯ ಪರಂಪರೆ, ಸಮಗ್ರ ಶಿಕ್ಷಣ, ಮಾನಸಿಕ ಒತ್ತಡ, ಜೀವನ ಮೌಲ್ಯಗಳು.

ಗುರುಕುಲ ಶಿಕ್ಷಣ ಪದ್ಧತಿಯು ಭಾರತದ ಅತ್ಯಂತ ಪುರಾತನ ಶಿಕ್ಷಣ ವ್ಯವಸ್ಥೆಯಾಗಿತ್ತು. ಗುರುಕುಲ ಶಿಕ್ಷಣ ಎಂದರೆ ರಾಜವಂಶದವರೂ ಸೇರಿದಂತೆ ಸಾಮಾನ್ಯ ಪ್ರಜಾ ವರ್ಗದ ವಿದ್ಯಾರ್ಥಿಗಳೆಲ್ಲರೂ ತಮ್ಮ ಆಸ್ತಿ, ಅಂತಸ್ತು, ಮೇಲು-ಕೀಳು ಎಂಬ ಭಾವನೆಗಳನ್ನು ಬದಿಗಿಟ್ಟು ಒಂದೇ ಕಡೆ, ಒಂದೇ ರೀತಿಯಲ್ಲಿ ಗುರುಗಳ ಸನ್ನಿಧಾನದಲ್ಲಿ ಅಥವಾ ಆಶ್ರಮದಲ್ಲೇ ಇದ್ದುಕೊಂಡು ವಿದ್ಯಾಭ್ಯಾಸವನ್ನು ಪಡೆಯುವುದು. ಇಂತಹ ಗುರುಕುಲಗಳಲ್ಲಿ ಯಾವುದೇ ರಾಜನ ಅಥವಾ ಆಡಳಿತಾಧಿಕಾರಿಯ ಹಸ್ತಕ್ಷೇಪ ಇರುತ್ತಿರಲಿಲ್ಲ. ಶಿಕ್ಷಣದ ಬಗ್ಗೆ ಗುರುಗಳ ನಿರ್ಧಾರವೇ ಅಂತಿಮ ನಿರ್ಧಾರವಾಗಿರುತ್ತಿತ್ತು. ಗುರುಕುಲಗಳಲ್ಲಿ ಮಕ್ಕಳ 5ನೇ ವಯಸ್ಸಿನಿಂದ ಹಿಡಿದು ವಿವಿಧ ರೀತಿಯ ವಿದ್ಯೆಗಳನ್ನು ಕಲಿಸಲಾಗುತ್ತಿತ್ತು. "ಗುರುಕುಲ ಶಿಕ್ಷಣವು ವಿದ್ಯಾರ್ಥಿಗಳಿಗೆ ಸಾಮಾಜಿಕ ಜ್ಞಾನ, ರಾಜನೀತಿ, ಆಧ್ಯಾತ್ಮಿಕ, ನೈತಿಕ, ಬೌದ್ಧಿಕ ಮತ್ತು ಶಾರೀರಿಕ ಬೆಳವಣಿಗೆಯನ್ನು ಒದಗಿಸುವ ಸಮಗ್ರ ಶಿಕ್ಷಣ ಪದ್ಧತಿಯಾಗಿತ್ತು. ವಿದ್ಯಾರ್ಥಿಗಳು ತಮ್ಮ ಗುರುಗಳೊಂದಿಗೆ ವಾಸಿಸುತ್ತಾ ಅವರಿಂದ ಶಿಕ್ಷಣವನ್ನು ಪಡೆಯುತ್ತಿದ್ದರು"[1]. ಗುರು-ಶಿಷ್ಯರ ಸಂಬಂಧ ಅತ್ಯಂತ ಶ್ರದ್ಧಾ ಪೂರ್ವಕವಾಗಿಯಿತ್ತು. ಶಿಷ್ಯನಾದವನು ತನ್ನ ಜೀವನವನ್ನು ಗುರು ಸೇವೆಗೆ ಅರ್ಪಿಸಿ ಅವರಿಂದ ವಿದ್ಯಾಭ್ಯಾಸ ಕಲಿಯುತ್ತಾ ಗುರುಕುಲದಲ್ಲೇ ವಾಸಿಸುತ್ತಿದ್ದನು. ಬೆಳಗ್ಗೆ ಬ್ರಾಹ್ಮೀ ಮುಹೂರ್ತದಲ್ಲಿ ವಿದ್ಯಾರ್ಥಿಗಳ ದೈನಂದಿನ ಕಾರ್ಯಗಳು ಪ್ರಾರಂಭವಾದರೆ ದಿನ ಪೂರ್ಣಗೊಳ್ಳುವವರೆಗೂ ವಿವಿಧ ರೀತಿಯ ವಿದ್ಯೆಗಳನ್ನು ಕಲಿಯುತ್ತಿದ್ದರು. ಇದರಿಂದ ಮಕ್ಕಳು ಮಾನಸಿಕವಾಗಿ ಅಲ್ಲದೆ ದೈಹಿಕವಾಗಿಯೂ ಸಹ ಸದೃಢರಾಗಿರುತ್ತಿದ್ದರು. ಗುರುಕುಲಗಳಲ್ಲಿ ಎಲ್ಲ ಮಕ್ಕಳಿಗೂ ಒಂದೇ ರೀತಿಯ ವಿದ್ಯಾಭ್ಯಾಸವನ್ನು ನೀಡುತ್ತಿರಲಿಲ್ಲ. ಯಾರಿಗೆ ಯಾವ ವಿಷಯದಲ್ಲಿ ಹೆಚ್ಚಿನ ಆಸಕ್ತಿ ಇದೆಯೋ ಅವರವರ ಅಭಿರುಚಿಗೆ ತಕ್ಕಂತೆ ವಿದ್ಯಾಭ್ಯಾಸ ನೀಡಲಾಗುತ್ತಿತ್ತು. ವಿದ್ಯಾಭ್ಯಾಸದ ನಂತರ ಪರೀಕ್ಷೆಯೆಂಬುದು ಬರವಣಿಗೆಯ ರೂಪದಲ್ಲಿರದೇ ಮೌಖಿಕ ಅಥವಾ ಪ್ರಯೋಗ ರೂಪದಲ್ಲಿರುತ್ತಿತ್ತು. ಗುರುಗಳು ಸಹ ಸಕಲ ಜ್ಞಾನವಲ್ಲಭರಾಗಿ ಎಲ್ಲ ವಿದ್ಯೆಗಳನ್ನು ಕಲಿತು ತಮ್ಮ ಜ್ಞಾನವನ್ನು ಮಕ್ಕಳಿಗೆ ಧಾರೆಯೆರೆಯುತ್ತಿದ್ದರು.

ಯಾವುದೇ ರೀತಿಯ ಶುಲ್ಕವನ್ನು ಪಡೆಯದೇ ಶಿಕ್ಷಣವನ್ನು ಗುರುಕುಲಗಳಲ್ಲಿ ಸಂಪೂರ್ಣ ಉಚಿತವಾಗಿ ನೀಡಲಾಗುತಿತ್ತು. ವಿದ್ಯಾರ್ಥಿಗಳು ತಮ್ಮ ಶಿಕ್ಷಣವನ್ನು ಸಂಪೂರ್ಣಗೊಳಿಸಿ ಗುರುಕುಲವನ್ನು ಬಿಟ್ಟು ತೆರಳುವಾಗ ತಮ್ಮ ಕೃತಜ್ಞತಾದ್ಯೋತಕವಾಗಿ ಗುರುಗಳಿಗೆ ದಕ್ಷಿಣೆಯನ್ನು ಸಮರ್ಪಿಸುತ್ತಿದ್ದರು. ಇಂತಹ ಗುರುದಕ್ಷಿಣೆಗೆ ಯಾವುದೇ ರೂಪವಾಗಲಿ, ಪ್ರಮಾಣವಾಗಲಿ ಇರಲಿಲ್ಲ. ಅವರವರ ವೃತ್ತಿ ಹಾಗು ಸಾಮರ್ಥ್ಯಗಳಿಗೆ ಅನುಗುಣವಾಗಿ ಗುರುದಕ್ಷಿಣೆಯನ್ನು ನೀಡುತ್ತಿದ್ದರು. ಕೃಷಿಕರು ತಾವು ಬೆಳೆದ ದವಸ ಧಾನ್ಯ, ಹಣ್ಣು ತರಕಾರಿಗಳನ್ನು ನೀಡಿದರೆ, ವೈಶ್ಯರ ಮಕ್ಕಳು ಗುರುಕುಲಕ್ಕೆ ಅಗತ್ಯವಾದ ವಸ್ತು ಸಾಮಗ್ರಿಗಳನ್ನು ನೀಡುತ್ತಿದ್ದರು. ರಾಜರ ಮಕ್ಕಳು ಭೂಮಿ, ಬಂಗಾರ, ಗೋವುಗಳ ರೂಪದಲ್ಲಿ ಗುರುದಕ್ಷಿಣೆ ಸಮರ್ಪಿಸಿದರೆ ಬಡವರ ಮಕ್ಕಳು ತಾವು ತಯಾರಿಸಿದ

ವಸ್ತ್ರ, ಮಣ್ಣಿನ ಪಾತ್ರೆಗಳು ಇತ್ಯಾದಿ ನಿತ್ಯೋಪಯೋಗಿ ವಸ್ತುಗಳನ್ನು ಅರ್ಪಿಸುತ್ತಿದ್ದರು. ಇವೆಲ್ಲವೂ ಹೃತ್ಪೂರ್ವಕ ಕೃತಜ್ಞತೆಯ ಸಾಕಾರರೂಪವಾಗಿ ಇರುತ್ತಿದ್ದವು. ಗುರುಕುಲ ಶಿಕ್ಷಣ ಪಡೆದ ನಂತರ ವಿದ್ಯಾರ್ಥಿ ಒಬ್ಬ ಸದೃಢ ವ್ಯಕ್ತಿಯಾಗಿ ಬೆಳೆದು ಸಮಾಜಕ್ಕೆ ಒಬ್ಬ ಒಳ್ಳೆಯ ಕೊಡುಗೆಯೇ ಆಗಿರುತ್ತಿದ್ದನು.

ನಮ್ಮ ಇಂದಿನ ಪ್ರಸ್ತುತ ಶಿಕ್ಷಣ ವ್ಯವಸ್ಥೆಯಲ್ಲಿ ಇರುವಂತೆ ವಿದ್ಯಾರ್ಥಿಗಳಿಗೆ ಪ್ರವೇಶ ಶುಲ್ಕ, ಬೋಧನಾ ಶುಲ್ಕ, ಕ್ರೀಡಾ ಶುಲ್ಕ, ಪರೀಕ್ಷಾ ಶುಲ್ಕ, ಇನ್ನಿತರ ಯಾವುದೇ ಶುಲ್ಕಗಳಿರುತ್ತಿರಲಿಲ್ಲ. ಎಲ್ಲರೂ ಗುರುಕುಲಗಳಲ್ಲೇ ವಾಸಿಸುತ್ತಿರುವುದರಿಂದ ಪ್ರಯಾಣ ಶುಲ್ಕದ ಮಾತೇ ಇರುತ್ತಿರಲಿಲ್ಲ. ಸಮಾಜದ ಎಲ್ಲ ವರ್ಗದವರಿಗೂ ಸಮಾನವಾದ ಶಿಕ್ಷಣವವನ್ನು ಒದಗಿಸಲಾಗುತ್ತಿತ್ತು. ಶ್ರೀಮಂತರು, ಬಡವ-ಬಲ್ಲಿದ ಎಂಬ ಭೇದ ಭಾವವಿರಲಿಲ್ಲ. ಗುರುಕುಲದ ನಿರ್ವಹಣೆಯ ಸಂಪೂರ್ಣ ಜವಾಬ್ದಾರಿಯನ್ನು ಇಡೀ ಸಮಾಜವೇ ಹೊರುತ್ತಿತ್ತು.

**ಗುರುಕುಲ ಶಿಕ್ಷಣ ವ್ಯವಸ್ಥೆ:**

ಗುರುಕುಲ ಪದ್ಧತಿಯಲ್ಲಿ ವೈದಿಕ ಮತ್ತು ಪ್ರಾಪಂಚಿಕವೆಂಬ ಎರಡು ವಿದ್ಯೆಗಳನ್ನು ಕಲಿಸುತ್ತಿದ್ದರು. ಪ್ರತಿಯೊಬ್ಬರಿಗೂ ಅರವತ್ನಾಲ್ಕು ರೀತಿಯ ವಿದ್ಯೆಗಳನ್ನು ಕಲಿಯುವ ಅವಕಾಶವಿತ್ತೆಂಬ ಉಲ್ಲೇಖವಿದೆ. ಅದರಲ್ಲಿ ಸಂಗೀತ, ನೃತ್ಯ, ಪಾಕ ನೈಪುಣ್ಯ, ಸಂಭಾಷಣಾ ಸಾಮರ್ಥ್ಯ, ಪುಷ್ಪಾಲಂಕಾರ ಮುಂತಾದ ಹಲವು ಕೌಶಲ್ಯಗಳನ್ನೂ ಬೋಧಿಸಲಾಗುತ್ತಿತ್ತು. ಆದರೆ ಇಂದು ಇಂತಹ ಶಿಕ್ಷಣ ಪದ್ಧತಿ ಮಾಯವಾಗಿದೆ. ಇಂದು ಶಿಕ್ಷಣ ಎಂದರೆ ಕೇವಲ ಉದ್ಯೋಗ ಪಡೆಯುವ ಒಂದು ಸಾಧನವಾಗಿ ತನ್ನ ಅತ್ಯಮೂಲ್ಯ ಉದ್ದೇಶವನ್ನೇ ಕಳೆದುಕೊಳ್ಳುತ್ತಿದೆ. ಗುರುಕುಲ ಶಿಕ್ಷಣ ಪದ್ಧತಿಯ ಪ್ರಕಾರ ಶಿಕ್ಷಣವು ಕೇವಲ ಉದ್ಯೋಗಕ್ಕಾಗಿ ಕೌಶಲ್ಯಗಳನ್ನು ಕಲಿಸುವ ಸಾಧನವಾಗಿರದೇ ಮಾನವ ಜೀವನದ ಪರಮೋದ್ದೇಶವಾದ ಆತ್ಮಜ್ಞಾನವನ್ನು ತೋರುವ ದಿವ್ಯ ಮಾರ್ಗವಾಗಿತ್ತು. ಇಂದಿನ ಶಿಕ್ಷಣ ಕ್ರಮವು ವಿದ್ಯಾರ್ಥಿಗಳಿಗೆ ಕೇವಲ ಉದ್ಯೋಗ ಪಡೆಯುವುದು ಮಾತ್ರವಲ್ಲದೆ ತಮ್ಮ ನೈಜತೆಯ ಸ್ವರೂಪವನ್ನು ಅರಿಯುವ ಮಾರ್ಗವನ್ನು ಒದಗಿಸಬೇಕಿದೆ.

"ಪ್ರಾಚೀನ ಗುರುಕುಲ ಪದ್ಧತಿಯಲ್ಲಿ ವೇದಗಳು ಮತ್ತು ಶಾಸ್ತ್ರಗಳು, ಗಣಿತ ಮತ್ತು ವಿಜ್ಞಾನ, ಧರ್ಮ ಮತ್ತು ನೈತಿಕ ಮೌಲ್ಯಗಳು, ಕಲೆಯ ತರಬೇತಿ, ಯುದ್ಧ ಕೌಶಲ್ಯ, ಶಾರೀರಿಕ ತರಬೇತಿ, ಅನುಶಾಸನ ಮತ್ತು ಸಂಸ್ಕಾರ ಮತ್ತು ವ್ಯಕ್ತಿತ್ವ ನಿರ್ಮಾಣವೆಲ್ಲವನ್ನು ಕಲಿಸುತ್ತಿದ್ದರು. ಅಂದು ವಿದ್ಯಾದಾನ ನಡೆಯುತ್ತಿದ್ದುದು ಪ್ರಕೃತಿಯ ಮಡಿಲಲ್ಲಿ. ಭಾರತದ ಸುಂದರ ಕಾನನಗಳೇ ವಿದ್ಯೆಯ ತಾಣಗಳಾಗಿರುತ್ತಿದ್ದವು. ಅಂದಿನ ಗುರುಗಳು ಋಷಿವರ್ಯರೇ ಆಗಿರುತ್ತಿದ್ದರು."[2] ತ್ಯಾಗದ ಮೂರ್ತಿಗಳಾಗಿ ಬಾಹ್ಯ ವೈಭವವನ್ನೆಲ್ಲಾ ತೊರೆದು ಖಾವಿ ಬಟ್ಟೆಯನ್ನು ಉಟ್ಟು ಅರಣ್ಯವಾಸಿಯಾಗಿರುತ್ತಿದ್ದ

ಗುರುವಿನಲ್ಲಿ ಆಧ್ಯಾತ್ಮಿಕ ಆನಂದ ಮತ್ತು ದೈವಿಕ ತೇಜಸ್ಸು ತುಂಬಿ ತುಳುಕುತ್ತಿತ್ತು.

**ಸನಾತನ ಗುರು–ಶಿಷ್ಯ ಪರಂಪರೆ:**

ಭಾರತೀಯ ಸಂಸ್ಕೃತಿಯಲ್ಲಿ ಗುರು–ಶಿಷ್ಯ ಪರಂಪರೆ ಅತ್ಯಂತ ಮಹತ್ವವನ್ನು ಹೊಂದಿದೆ. ಇದು ಪ್ರಾಚೀನ ಕಾಲದಿಂದಲೂ ಜ್ಞಾನ, ಸಂಸ್ಕಾರ, ಮತ್ತು ಧರ್ಮದ ಪರಂಪರೆಯನ್ನು ಮುಂದುವರೆಸುತ್ತ ಬಂದಿರುವ ಪರಂಪರೆಯಾಗಿದೆ. ಈ ಪದ್ಧತಿಯ ಮೂಲಕ ಶಿಷ್ಯರು ಜ್ಞಾನವನ್ನು ಪಡೆದು ಸಂಸ್ಕಾರಯುಕ್ತ ಜೀವನ ನಡೆಸಲು ಮಾರ್ಗದರ್ಶನ ಪಡೆಯುತ್ತಾರೆ. ಗುರು–ಶಿಷ್ಯ ಪರಂಪರೆಯು ಭಾರತೀಯ ಸಂಸ್ಕೃತಿಯಲ್ಲಿ ಆಳವಾಗಿ ಬೇರೂರಿದ್ದು, ವೇದಗಳ ಕಾಲದಲ್ಲಿ ಇದರ ಉಗಮವಾಯಿತೆಂದು ಹೇಳಬಹುದು. ವೈದಿಕ ಸಂಪ್ರದಾಯದಲ್ಲಿ ಜ್ಞಾನವು ಕೇವಲ ಮೌಖಿಕ ಬೋಧನೆಯಿಂದ ಗುರುವಿನಿಂದ ಶಿಷ್ಯನಿಗೆ ಹರಿದುಬರುತ್ತಿತ್ತು. ಪವಿತ್ರ ಗ್ರಂಥಗಳ ಹಾಗೂ ಅವುಗಳಲ್ಲಿನ ಆಚರಣೆಗಳು ಮತ್ತು ತತ್ವಾದರ್ಶಗಳನ್ನು ರಕ್ಷಿಸುವುದೇ ಈ ಸಂಪ್ರದಾಯದ ಗುರಿಯಾಗಿತ್ತು. ಗುರುವಿನಿಂದ ಜ್ಞಾನವನ್ನು ಪಡೆದ ಶಿಷ್ಯನು ತಾನು ಕಲಿತ ವಿಷಯಗಳನ್ನು ಪರಂಪರೆಯಾಗಿ ಅನುಸರಿಸಿಕೊಂಡು ಬರುತ್ತಿದ್ದರು.

ಗುರುಕುಲ ಶಿಕ್ಷಣ ವ್ಯವಸ್ಥೆಯಲ್ಲಿ ಶಿಷ್ಯನು ಗುರುವಿನ ಬೋಧನೆಯೊಂದಿಗೆ ಅತ್ಯಂತ ಶ್ರದ್ಧೆಯಿಂದ ವಿದ್ಯೆ, ಕಾರ್ಯಕುಶಲತೆ ಮತ್ತು ಜೀವನ ಮೌಲ್ಯಗಳನ್ನು ಬಹು ಪರಿಣಾಮಕಾರಿಯಾಗಿ ಕಲಿಯುತ್ತಿದ್ದನು. ಇಲ್ಲಿ ಗುರು – ಶಿಷ್ಯರ ಸಂಬಂಧವು ಕೇವಲ ಪಠ್ಯಕ್ರಮಕ್ಕೆ ಸೀಮಿತವಾಗಿರದೇ ಆಧ್ಯಾತ್ಮಿಕ ಮತ್ತು ನೈತಿಕ ಮಾರ್ಗದರ್ಶನಗಳಿಗೂ ವ್ಯಾಪಿಸಿರುತ್ತಿತ್ತು. ಶಿಷ್ಯನು ಗುರುವಿನ ಸಮ್ಮುಖದಲ್ಲೇ ಕುಳಿತು ಆಧ್ಯಾತ್ಮಿಕ ಮತ್ತು ತಾತ್ವಿಕ ಬೋಧನೆಗಳನ್ನು ವೈಯಕ್ತಿಕವಾಗಿ ಪಡೆಯುತ್ತಿದ್ದನು. ಹೀಗೆ ಗುರು –ಶಿಷ್ಯರ ಸಂಬಂಧವು ಶೈಕ್ಷಣಿಕ ಕ್ಷೇತ್ರವನ್ನು ಮೀರಿ ಆಧ್ಯಾತ್ಮಿಕ ಮತ್ತು ನೈತಿಕ ಮಾರ್ಗದರ್ಶನಗಳನ್ನೂ ಒಳಗೊಂಡಿತ್ತು. ಅಂದಿನ ವಿದ್ಯಾಭ್ಯಾಸ ಕ್ರಮದ ಅತಿ ಪ್ರಮುಖ ಅಂಶವೆಂದರೆ ಪವಿತ್ರವಾದ, ಅಭೇದವಾದ ಗುರು ಶಿಷ್ಯರ ಸಂಬಂಧ. "ಅಧ್ಯಾಪಕರೆಂದರೆ ಭಗವಂತನ ಸಾಕ್ಷಾತ್ ಪ್ರತಿನಿಧಿಗಳೆಂದು ಅಂದಿನ ವಿದ್ಯಾರ್ಥಿಗಳು ತಿಳಿಯುತ್ತಿದ್ದರು. ಅತ್ಯಂತ ಭಕ್ತಿ ಭಾವದಿಂದ ಅಂದಿನ ಗುರುಗಳನ್ನು ನೋಡುತ್ತಿದ್ದರು. ಗುರುವಿನ ಜ್ಞಾನವು ಹೆಚ್ಚಾಗಿದಷ್ಟು ಆತನು ಪಡೆಯುತ್ತಿದ್ದ ಗೌರವ ಮತ್ತು ಆದರಗಳು ಹೆಚ್ಚಾಗಿರುತ್ತಿದ್ದವು"[3]. ಅವರ ಸಂಪರ್ಕದಿಂದ ಆತನ ಶಿಷ್ಯರಿಗೂ ಆಧ್ಯಾತ್ಮಿಕ ಆನಂದದ ರುಚಿ ಸಿಗುತಿತ್ತು. ಇದರಿಂದ ಶಿಷ್ಯರ ಅಂತರಂಗದಲ್ಲಿ ಆತ್ಮಾನಂದದ ಕಿರಣಗಳು ಮೂಡಿ ಪ್ರಾಪಂಚಿಕ ಸುಖಗಳನ್ನು ತೊರೆದು ಜ್ಞಾನವಂತರಾಗಲು ಯತ್ನಿಸುತ್ತಿದ್ದರು. ಹೀಗೆ ಗುರು ಸಾಮಿಪ್ಯವೇ ಅಂದಿನ ಕಾಲದಲ್ಲಿ ಜ್ಯೋತಿಷ್ಯ, ಖಗೋಳ, ತರ್ಕ, ನ್ಯಾಯ, ವಿಜ್ಞಾನ, ಆಯುರ್ವೇದ, ಮೊದಲಾದ ಸಕಲ ಶಾಸ್ತ್ರಗಳನ್ನು ಆಳವಾಗಿ ಸಂಶೋಧನೆ ಮಾಡಿ ಮುಂದುವರೆಯಲು ಸಾಧ್ಯವಾಯಿತು.

**ದ್ರೋಣಾಚಾರ್ಯ ಮತ್ತು ಅರ್ಜುನ:** ಅರ್ಜುನನಿಗೆ ಧನುರ್ವಿದ್ಯೆಯಲ್ಲಿ ಅಪಾರ ಪಾಂಡಿತ್ಯವನ್ನು ಕಂಡುಕೊಳ್ಳಲು ದ್ರೋಣಾಚಾರ್ಯರು ಸಹಾಯ ಮಾಡಿದರು.

**ಸಾಂದೀಪನಿ ಮತ್ತು ಶ್ರೀ ಕೃಷ್ಣ:** ಶ್ರೀ ಕೃಷ್ಣನ ಗುರು ಸಾಂದೀಪನಿ ಮುನಿಗಳಲ್ಲಿ ವಿದ್ಯಾಭ್ಯಾಸ ಮಾಡಿ ಜಗದೋದ್ಧಾರಕನಾದ.

**ಚಾಣಕ್ಯ ಮತ್ತು ಚಂದ್ರಗುಪ್ತ ಮೌರ್ಯ:** ಋಷಿ ಸದೃಶರಾದ ಚಾಣುಕ್ಯರು ಒಬ್ಬ ಮಹಾನ್ ತತ್ವಜ್ಞಾನಿ ಹಾಗು ರಾಜನೀತಿ ತಜ್ಞನಾಗಿದ್ದರು. ಚಂದ್ರಗುಪ್ತ ಮೌರ್ಯನನ್ನು ಚಕ್ರವರ್ತಿಯನ್ನಾಗಿ ರೂಪಿಸಿದರು. ಒಬ್ಬ ಯಶಸ್ವಿ ರಾಜಗುರುವಾಗಿ ಇತಿಹಾಸದಲ್ಲಿ ಗುರುತಿಸಿಕೊಂಡಿದ್ದಾರೆ.

**ಆದಿ ಶಂಕರಾಚಾರ್ಯರು ಮತ್ತು ಅವರ ಶಿಷ್ಯಂದಿರು:** ಅತ್ಯಂತ ಪ್ರಭಾವಶಾಲಿ ತತ್ವಜ್ಞಾನಿಗಳಾದ ಆದಿ ಶಂಕರಾಚಾರ್ಯರು, ಸುರೇಶ್ವರ, ಹಸ್ತಾಮಲಕ, ಪದ್ಮಪಾದ, ಮತ್ತು ತೋಟಕಾಚಾರ್ಯರಂತಹ ಶಿಷ್ಯರನ್ನು ಜಗತ್ತಿಗೆ ನೀಡಿದರು. ಅವರ ಶಿಷ್ಯಂದಿರು ಅದ್ವೈತ ವೇದಾಂತವನ್ನು ಭಾರತದಾದ್ಯಂತ ಪಸರಿಸುವಲ್ಲಿ ಪ್ರಮುಖ ಪಾತ್ರ ವಹಿಸಿದರು.

**ರಾಮ ಕೃಷ್ಣ ಪರಮ ಹಂಸ ಮತ್ತು ಸ್ವಾಮಿ ವಿವೇಕಾನಂದ:** ಸ್ವಾಮಿ ವಿವೇಕಾನಂದರು ತಮ್ಮ ಗುರು ರಾಮಕೃಷ್ಣ ಪರಮಹಂಸರ ಮಾರ್ಗದರ್ಶನ ಪಡೆದು ವಿಶ್ವ ಚೇತನರಾದರು.

**ಗುರುಕುಲ ಶಿಕ್ಷಣ ಪದ್ಧತಿಯ ಪ್ರಯೋಜನಗಳು:**

1. ವಿದ್ಯಾರ್ಥಿಗಳಿಗೆ ಕೇವಲ ಪಠ್ಯಭ್ಯಾಸವಷ್ಟೇ ಅಲ್ಲದೇ, ಜೀವನ ಕೌಶಲ್ಯಗಳನ್ನು ಮತ್ತು ಸಂಸ್ಕೃತಿಯ ಅರಿವನ್ನು ಕಲಿಸಲಾಗುತ್ತಿತ್ತು.
2. ಶಿಷ್ಯರು ಸ್ವಾವಲಂಬಿ, ಶಿಷ್ಟ ಹಾಗೂ ಶಿಸ್ತುಬದ್ಧ ವ್ಯಕ್ತಿಗಳಾಗುತ್ತಿದ್ದರು.
3. ಗುರು- ಶಿಷ್ಯರ ಮೂಲಕ ಶ್ರದ್ಧೆ, ಭಕ್ತಿ ಹಾಗು ಗೌರವದ ಸಂಸ್ಕೃತಿ ಬೆಳೆಸಲಾಗುತ್ತಿತ್ತು.
4. ಆಧ್ಯಾತ್ಮಿಕ ಬೆಳವಣಿಗೆ ಮತ್ತು ಸಮಗ್ರ ಶಿಕ್ಷಣ ನೀಡುವ ಮೂಲಕ ಸಮಾಜದ ಸುಧಾರಣೆಗೆ ಸಹಾಯವಾಗುತ್ತಿತ್ತು.

**ಪ್ರಸ್ತುತ ಶಿಕ್ಷಣ ವ್ಯವಸ್ಥೆಯಲ್ಲಿ ಗುರು-ಶಿಷ್ಯ ಪರಂಪರೆ:**

ಪ್ರಾಚೀನ ಗುರುಕುಲ ಶಿಕ್ಷಣ ವ್ಯವಸ್ಥೆಯಲ್ಲಿ ಗುರು-ಶಿಷ್ಯರ ಸಂಬಂಧ ಅತ್ಯಂತ ನಿಕಟ ಮತ್ತು ವ್ಯಕ್ತಿಗತವಾಗಿರುತ್ತಿತ್ತು. ಇಂದಿನ ಶಿಕ್ಷಣ ವ್ಯವಸ್ಥೆ ಸಂಪೂರ್ಣ ವಿರುದ್ಧವಾಗಿದೆ. ಇಂದು ಗುರು ಪರಂಪರೆಯೆನ್ನುವ ವಿಷಯವೇ ಇಲ್ಲದಂತಾಗಿದೆ. ಪ್ರಾಚೀನ ಕಾಲದಲ್ಲಿ ಗುರು ಶಿಷ್ಯನ ಜೀವನದ ಪ್ರತಿಯೊಂದು ಹಂತದಲ್ಲಿಯೂ

ದಾರಿದೀಪವಾಗಿ ನಿಲ್ಲುತ್ತಿದ್ದರು. ಇಂದಿನ ಆಧುನಿಕ ಶಿಕ್ಷಕರು ಪರಾಮರ್ಶಕರಾಗಿ ಅಥವಾ ಆನ್ಲೈನ್ ತರಬೇತುದಾರರಾಗಿ ಮಾರ್ಗದರ್ಶನ ನೀಡುತ್ತಿದ್ದಾರೆ. ಡಿಜಿಟಲ್ ತಂತ್ರಜ್ಞಾನ, ಆನ್ಲೈನ್ ಕೋರ್ಸ್ ಗಳು ಪ್ರಾರಂಭವಾಗಿ, ಪ್ರಾಚೀನ ಕಾಲದಲ್ಲಿ ಶಿಷ್ಯರು ಗುರುಗಳಿಗೆ ತೋರುತ್ತಿದ್ದ ವಿಧೇಯತೆ, ಗೌರವಗಳು ಇಂದಿನ ಪೀಳಿಗೆಯಲ್ಲಿ ಮರೆಯಾಗಿ, ವಿದ್ಯಾರ್ಥಿಗಳು ಪ್ರಶ್ನಾತ್ಮಕ ಮನೋಭಾವನೆ ಹೊಂದಿದ್ದು, ಗುರುವಿನ ಸಾಮರ್ಥ್ಯವನ್ನು ಪ್ರಶ್ನಿಸುವ ಪ್ರವೃತ್ತಿ ನಡೆಯುತ್ತಿದೆ. ತಂತ್ರಜ್ಞಾನದ ಬೆಳವಣಿಗೆಯಿಂದ ಸ್ಪರ್ಧಾತ್ಮಕ ಧೋರಣೆಗಳು ಹೆಚ್ಚಾಗಿ ಗುರು-ಶಿಷ್ಯ ಪರಂಪರೆ ಕಾಣೆಯಾಗುತ್ತಿದೆ. ಆದ್ದರಿಂದ ಗುರು-ಶಿಷ್ಯ ಪರಂಪರೆ ಉಳಿಯಬೇಕಾದರೆ ಇಂದಿನ ಶಿಕ್ಷಣ ಪದ್ಧತಿಯಲ್ಲಿ ನೈತಿಕ ಮೌಲ್ಯಗಳ ಕಲಿಕೆಗೆ ಆದ್ಯತೆ ನೀಡಿ ಅವುಗಳಿಗೆ ಮರುಜೀವ ನೀಡಬೇಕಾಗಿದೆ. ಇಂದು ಗುರುಗಳಿಗೆ ಗೌರವ ಸ್ಥಾನವಿಲ್ಲ. "ಭಾರತದ ಪ್ರಾಚೀನ ಪರಂಪರೆಯಲ್ಲಿ ಅವರಷ್ಟು ಗೌರವಾನ್ವಿತ ಸ್ಥಾನವು ಯಾರದೂ ಇರಲಿಲ್ಲ. ಸಮಾಜವು ಅವರನ್ನು ಬಹಳಷ್ಟು ಪೂಜ್ಯ ಭಾವನೆಯಿಂದ ಕಾಣುತ್ತಿತ್ತು"[4].

**ಪ್ರಸ್ತುತ ಶಿಕ್ಷಣ ವ್ಯವಸ್ಥೆ ಮತ್ತು ಪ್ರಾಚೀನ ಗುರುಕುಲ ವ್ಯವಸ್ಥೆ:**

ಇಂದಿನ ಆಧುನಿಕ ಶಿಕ್ಷಣ ವ್ಯವಸ್ಥೆ ಮತ್ತು ಪ್ರಾಚೀನ ಗುರುಕುಲ ಶಿಕ್ಷಣ ವ್ಯವಸ್ಥೆ ಒಂದೇ ಗುರಿಯನ್ನು ಹೊಂದಿದ್ದರೂ, ಅವು ಕಾರ್ಯರೂಪದಲ್ಲಿ ಭಿನ್ನ ಭಿನ್ನವಾಗಿವೆ. ಪ್ರಾಚೀನ ಗುರುಕುಲ ಶಿಕ್ಷಣ ಪದ್ಧತಿ ಮಕ್ಕಳನ್ನು ಶಾರೀರಿಕ, ಮಾನಸಿಕ ಮತ್ತು ಆಧ್ಯಾತ್ಮಿಕವಾಗಿ ಸಮಗ್ರ ವ್ಯಕ್ತಿತ್ವ ಬೆಳೆಸಲು ನೆರವಾಗುತಿತ್ತು. ಆದರೆ ಆಧುನಿಕ ಶಿಕ್ಷಣವು ಪ್ರಧಾನವಾಗಿ ಬೌದ್ಧಿಕ ಜ್ಞಾನವನ್ನು ಮಾತ್ರ ಕೇಂದ್ರೀಕರಿಸಿದೆ. ಗುರುಕುಲ ಶಿಕ್ಷಣದಲ್ಲಿ ಶಿಕ್ಷಣದ ಪ್ರಮುಖ ಉದ್ದೇಶ ವ್ಯಕ್ತಿತ್ವ ವಿಕಸನ, ಧರ್ಮ, ಜೀವನದ ಕೌಶಲ್ಯವಾಗಿತ್ತು. "ಪ್ರಸ್ತುತ ಶಿಕ್ಷಣ ವ್ಯವಸ್ಥೆಯಲ್ಲಿ ಕೇವಲ ಉದ್ಯೋಗ ಪಡೆಯಲು ನೀಡುವ ತಾಂತ್ರಿಕ ಶಿಕ್ಷಣವಾಗಿದೆ. ಗುರುಗಳು ಶಿಷ್ಯನ ಜೀವಮಾನದುದ್ದಕ್ಕೂ ಮಾರ್ಗದರ್ಶನ ಮಾಡುತ್ತಿದ್ದರು, ಇಂದು ಒಂದೇ ವಿಷಯವನ್ನು ಬೋಧಿಸುತ್ತಾರೆ. ಪ್ರಾಚೀನ ಕಾಲದಲ್ಲಿ ವಿದ್ಯಾರ್ಥಿಗಳಿಗೆ ಯಾವುದೇ ಮಾನಸಿಕ ಒತ್ತಡ ಇಲ್ಲದೆ ಧ್ಯಾನಾತ್ಮಕ ಕಲಿಕೆಯಾಗಿತ್ತು. ಪ್ರಸ್ತುತ ಶಿಕ್ಷಣ ವ್ಯವಸ್ಥೆಯಲ್ಲಿ ವಿದ್ಯಾರ್ಥಿಗಳು ಅತ್ಯಂತ ಒತ್ತಡಕ್ಕೆ ಒಳಗಾಗುತ್ತಿದ್ದಾರೆ."[5]

**ಸಮಕಾಲೀನ ಶಿಕ್ಷಣ ವ್ಯವಸ್ಥೆಯಲ್ಲಿ ಗುರುಕುಲ ಶಿಕ್ಷಣದ ಪ್ರಭಾವ:**

ಆಧುನಿಕ ಶಿಕ್ಷಣ ವ್ಯವಸ್ಥೆಯಲ್ಲಿ ಗುರುಕುಲ ಪರಂಪರೆಯ ಕೆಲವು ಅಂಶ ಇನ್ನೂ ಜೀವಂತವಾಗಿವೆ. ಆಧ್ಯಾತ್ಮಿಕ, ನೈತಿಕ ಮೌಲ್ಯಗಳ ಬೋಧನೆ, ಯೋಗ ಮತ್ತು ಪ್ರಾಚೀನ ಶಾಸ್ತ್ರಗಳ ಅಧ್ಯಯನವನ್ನು ಪುನಃ ಜಾಗೃತಗೊಳಿಸಲಾಗುತ್ತಿದೆ. ಕೆಲವು ಸಂಸ್ಥೆಗಳು ಇನ್ನು ಪೌರಾಣಿಕ ಮಾದರಿಯ ಶಿಕ್ಷಣವನ್ನು ಅನುಸರಿಸುತ್ತಿದೆ. ಈಗಾಗಲೇ ಭಾರತದಲ್ಲಿ ಹಲವು ಆಧ್ಯಾತ್ಮಿಕ, ವೇದಾಧ್ಯಯನ ಮತ್ತು ಸಂಸ್ಕೃತ ಮಹಾ ವಿದ್ಯಾಲಯಗಳು ಪ್ರಾಚೀನ ಗುರುಕುಲ ಪರಂಪರೆಯನ್ನು ಅನುಸರಿಸುತ್ತಿವೆ.

**ಪ್ರಾಚೀನ ಗುರುಕುಲ ಶಿಕ್ಷಣದಿಂದ ಪ್ರಸ್ತುತ ಶಿಕ್ಷಣ ವ್ಯವಸ್ಥೆಯಲ್ಲಿ ಆಗುವ ಪ್ರಯೋಜನಗಳು:**

**ಜೀವನ ಮೌಲ್ಯಗಳನ್ನು ಉತ್ತೇಜಿಸುವ ಶಿಕ್ಷಣ:** ಪ್ರತಿಯೊಬ್ಬ ವಿದ್ಯಾರ್ಥಿಯಲ್ಲಿ ಶೀಲ, ಸಂಸ್ಕಾರ, ಮತ್ತು ಧಾರ್ಮಿಕ ಚಿಂತನೆಗಳನ್ನು ರೂಪಿಸಬೇಕು.

**ಗುರು-ಶಿಷ್ಯ ಪರಂಪರೆಯ ಮಹತ್ವ:** ಶಿಕ್ಷಕರನ್ನು ಕೇವಲ ಪಾಠ ಹೇಳಿಕೊಡುವ ವ್ಯಕ್ತಿಗಳಾಗಿ ನೋಡದೆ, ಜೀವನ ಮಾರ್ಗದರ್ಶಕರಾಗಿ ಪರಿಗಣಿಸಬೇಕು.

**ಆಧ್ಯಾತ್ಮ ಮತ್ತು ಧ್ಯಾನ:** ಮಕ್ಕಳಿಗೆ ಧ್ಯಾನ, ಪ್ರಾರ್ಥನೆ, ಭಕ್ತಿ, ಮತ್ತು ಆತ್ಮಾವಲೋಕನ ಜ್ಞಾನವನ್ನು ನೀಡಬೇಕು.

**ಪ್ರಕೃತಿಯೊಂದಿಗೆ ಕಲಿಕೆ:** ಪಠ್ಯಗಳ ಜೊತೆ ಅನುಭವಾತ್ಮಕ ವಿದ್ಯಾಭ್ಯಾಸವನ್ನೂ ಒದಗಿಸಬೇಕು, ಪ್ರಕೃತಿಯೊಳಗಿನ ಶಿಕ್ಷಣ ಹೆಚ್ಚಿಸಬೇಕು.

**ಮಕ್ಕಳ ಒತ್ತಡ ನಿವಾರಣೆ:** ಅಂಕಗಳು ಜೀವನದ ಗುರಿಯಲ್ಲ, ಜ್ಞಾನ ಮತ್ತು ಸಾಮರ್ಥ್ಯ ಮುಖ್ಯ ಎಂಬ ಭಾವನೆ ಇಂದಿನ ಮಕ್ಕಳಲ್ಲಿ ಮೂಡಿಸಬೇಕು.

ಇಂದಿನ ಆಧುನಿಕ ಶಿಕ್ಷಣ ಪದ್ಧತಿಯಲ್ಲಿ ಗುರುಕುಲ ಪದ್ಧತಿಯ ಪರಿಕಲ್ಪನೆಗಳನ್ನು ಸೇರಿಸಿದರೆ, ಮಕ್ಕಳ ಮಾನಸಿಕ ಒತ್ತಡವನ್ನು ತಗ್ಗಿಸಿ, ಅವರನ್ನು ಮಾನವೀಯ ಸಂಸ್ಕಾರಯುತ ಮತ್ತು ಸಮಗ್ರ ವ್ಯಕ್ತಿಗಳಾಗಿ ರೂಪಿಸಬಹುದು. ಶಿಕ್ಷಣ ಎಂದರೆ ಬರಿ ಅಂಕಗಳನ್ನು ಗಳಿಸುವ ವಿಷಯ ಮಾತ್ರವಲ್ಲದೇ ಶಿಕ್ಷಣವು ಸಂತೋಷದಾಯಕವಾದ ಕಲಿಕೆಯಾಗ ಬೇಕು.

**ಪ್ರಸ್ತುತ ಶಿಕ್ಷಣ ವ್ಯವಸ್ಥೆಯಿಂದ ಮಕ್ಕಳ ಮಾನಸಿಕ ಸ್ಥಿತಿಗತಿ:**

ಇಂದಿನ ಆಧುನಿಕ ಶಿಕ್ಷಣ ವ್ಯವಸ್ಥೆಯು ಬಹುಪಾಲು ಪಾಶ್ಚಾತ್ಯ ಮಾದರಿಯನ್ನೇ ಅನುಸರಿಸುತ್ತಿದ್ದು, ವಿದ್ಯಾರ್ಥಿಗಳಿಗೆ ಜ್ಞಾನ ನೀಡುವ ಬದಲು ಅವರನ್ನು ಓದಲು ಒತ್ತಾಯಿಸುವ, ಅಂಕಗಳ ಹಿಂದೆ ಓಡಿಸುವ ಹಾಗೂ ಬೌದ್ಧಿಕ ಯಶಸ್ಸಿಗೆ ಮಾತ್ರ ಒತ್ತು ನೀಡುವಂತಾಗಿದೆ. "ಈ ವ್ಯವಸ್ಥೆಯು ಬಹಳಷ್ಟು ಕಸರತ್ತಿನ ಅಧ್ಯಯನ, ಪರೀಕ್ಷಾ ಒತ್ತಡ, ಸ್ಪರ್ಧಾತ್ಮಕ ಮನೋಭಾವ, ಮತ್ತು ನಿರಂತರ ದಣಿವು ಉಂಟು ಮಾಡುತ್ತಿದೆ. ಇದರ ಪರಿಣಾಮವಾಗಿ ಮಕ್ಕಳು ಮಾನಸಿಕ ತೊಡಕು, ಆತಂಕ, ಮನೋವ್ಯಥೆ, ಆತ್ಮ ವಿಶ್ವಾಸದ ಕೊರತೆಯಿಂದ ಮತ್ತು ಜೀವನದ ಕುರಿತು ಅಸಮಾಧಾನವನ್ನು ಅನುಭವಿಸುತ್ತಿದ್ದಾರೆ."[6]

**ಈ ಪರಿಸ್ಥಿತಿಯಿಂದ ಹೊರಬರುವ ಕ್ರಮಗಳು:**

**ಗುಣಾತ್ಮಕ ಶಿಕ್ಷಣ:** ಇಂದಿನ ಮಕ್ಕಳಿಗೆ ಅಂಕಗಳ ಮೇಲೆ ಒತ್ತಡ ಹಾಕುವ ಬದಲು ಅಧ್ಯಯನವನ್ನು ಆನಂದಕರವಾಗಿ ಮತ್ತು ಅರ್ಥಪೂರ್ಣವಾಗಿ

ರೂಪಿಸಬೇಕು.

**ಮಾನವೀಯ ಮತ್ತು ಸಂಸ್ಕಾರಯುತ ಶಿಕ್ಷಣ:** ವಿದ್ಯಾರ್ಥಿಗಳಿಗೆ ಸಂಸ್ಕಾರ, ನೈತಿಕ ಮೌಲ್ಯಗಳು, ಮತ್ತು ಧರ್ಮದ ಪ್ರಾಮುಖ್ಯತೆಯನ್ನು ಕಲಿಸುವ ಮೂಲಕ ಸೌಂದರ್ಯಯುತ ಜೀವನವನ್ನು ರೂಪಿಸಬೇಕು.

**ಅಧ್ಯಾತ್ಮ ಜಾಗೃತಿ:** ಮಕ್ಕಳಿಗೆ ಧ್ಯಾನ, ಪ್ರಾರ್ಥನೆ, ಮತ್ತು ವೇದ– ಗೀತಾದಿ ಪಾಠಗಳನ್ನು ಕಲಿಸುವ ಮೂಲಕ ಮನಸ್ಸಿನ ಶಾಂತಿ ಮತ್ತು ಸ್ಥಿರತೆಯನ್ನು ನೀಡಬೇಕು.

**ಆತ್ಮ ವಿಶ್ವಾಸ ವೃದ್ಧಿಸುವ ಶಿಕ್ಷಣ:** ಪ್ರತಿಯೊಬ್ಬ ವಿದ್ಯಾರ್ಥಿಗೆ ಅವರ ವೈಯಕ್ತಿಕ ಸಾಮರ್ಥ್ಯವನ್ನು ಗುರುತಿಸಿ ಪ್ರೋತ್ಸಾಹಿಸುವ ವ್ಯವಸ್ಥೆ ಇರಬೇಕು.

**ಸಹಜ ಕಲಿಕೆಯ ಪರಂಪರೆ:** ಕೇವಲ ಪಠ್ಯಪುಸ್ತಕದ ಮೇಲೆ ನಂಬಿಕೆ ಇಡದೇ, ಅನುಭವದ ಮೂಲಕ ಕಲಿಯುವ ಗುರುಕುಲ ಪದ್ಧತಿಯ ಮಾದರಿಯನ್ನು ಅನುಸರಿಸಬೇಕು.

**ಪ್ರಕೃತಿಯೊಂದಿಗೆ ಸಂಪರ್ಕ:** ಶಾಲೆಗಳ ಪರಿಸರವನ್ನು ಪ್ರಕೃತಿಯೊಳಗೆ ನೀಡುವ ಮೂಲಕ ಮಕ್ಕಳಿಗೆ ನೆಮ್ಮದಿ ಮತ್ತು ಬೌದ್ಧಿಕ ಬೆಳವಣಿಗೆಯನ್ನು ಒದಗಿಸಬೇಕು.

ಆಧುನಿಕ ಶಿಕ್ಷಣ ಪದ್ಧತಿಯಲ್ಲಿ ಇಂತಹ ಕ್ರಮಗಳನ್ನು ಅನುಸರಿಸಿದರೆ, ಪ್ರಸ್ತುತ ಶಿಕ್ಷಣ ವ್ಯವಸ್ಥೆಯಲ್ಲಿ ಆಗುತ್ತಿರುವ ಹಾನಿಯನ್ನು ತಿದ್ದಿಕೊಂಡು, ಮಕ್ಕಳಿಗೆ ಶಾಶ್ವತ ಆನಂದ ಮತ್ತು ಜ್ಞಾನವನ್ನು ನೀಡುವ ಪರಿಪೂರ್ಣ ವಿದ್ಯಾಬೋಧನೆಯನ್ನು ರೂಪಿಸಬಹುದು. ಇಂದು ಮಕ್ಕಳು ಅತಿಯಾದ ಶಿಕ್ಷಣದ ಒತ್ತಡದಿಂದ ಮಾನಸಿಕವಾಗಿ ಆತ್ಮಹತ್ಯೆಗೆ ಶರಣಾಗುತ್ತಿರುವರನ್ನು ಕಾಣಬಹುದು. ಇವೆಲ್ಲದಕ್ಕೂ ಪರಿಹಾರ, ಇಂದಿನ ಶಿಕ್ಷಣ ವ್ಯವಸ್ಥೆಯಲ್ಲಿ ಬದಲಾವಣೆಯಾಗಬೇಕಾಗಿದೆ. ಪ್ರಾಚೀನ ಶಿಕ್ಷಣದ ಕೆಲವು ಅಂಶಗಳನ್ನು ಇಂದಿನ ಶಿಕ್ಷಣದಲ್ಲಿ ಅನುಸರಿಸಿದರೆ ಉತ್ತಮ ಸಮಾಜವು ನಿರ್ಮಾಣವಾಗುತ್ತದೆ. ಆದ್ದರಿಂದ ಪ್ರಸ್ತುತ ಶಿಕ್ಷಣದಲ್ಲಿ ಗುರುಕುಲ ಪದ್ಧತಿಯ ಅಂಶಗಳನ್ನು ಅನುಸರಿಸುವುದು ಅತ್ಯಂತ ಅಗತ್ಯವಾಗಿದೆ.

**ಅಡಿ ಟಿಪ್ಪಣಿಗಳು:**

1. ಶ್ರೀ ಮಡಿಯಾಲ ನಾರಾಯಣ ಭಟ್, (1966), ಭಾರತ ದರ್ಶನ, ಶ್ರೀ ಸತ್ಯಸಾಯಿ ಲೋಕಸೇವಾ ಪ್ರಕಾಶನ, ಅಳಿಕೆ, ದಕ್ಷಿಣ ಕನ್ನಡ, ಪು.ಸಂ. 193

2. ಶ್ರೀ ಮಡಿಯಾಲ ನಾರಾಯಣ ಭಟ್, (1966), ಭಾರತ ದರ್ಶನ, ಶ್ರೀ ಸತ್ಯಸಾಯಿ ಲೋಕಸೇವಾ ಪ್ರಕಾಶನ, ಅಳಿಕೆ, ದಕ್ಷಿಣ ಕನ್ನಡ, ಪು.ಸಂ. 199

3. ಅಲ್ಟೇಕರ್ ಎ.ಎಸ್., (2009), ಪ್ರಾಚೀನ ಭಾರತದಲ್ಲಿ ಶಿಕ್ಷಣ, ಇಶಾ ಬುಕ್ಸ್, ಪು.ಸಂ. 96

4. ಸಹಾನ್ ಸಿಂಗ್, (2017), ಪ್ರಾಚೀನ ಭಾರತದಲ್ಲಿ ಶೈಕ್ಷಣಿಕ ಪರಂಪರೆ – ಕಲಿಕೆಯ ಪರಿಸರ ವ್ಯವಸ್ಥೆಯು ಹೇಗೆ ವ್ಯರ್ಥವಾಯಿತು, ನೋಷನ್ ಪ್ರೆಸ್, ಪು.ಸಂ. 124

5. ಶ್ರೀ ಮಡಿಯಾಲ ನಾರಾಯಣ ಭಟ್, (1973), ವಿರಾಟ್ ರೂಪದ ಭಾರತೀಯ ಮಿಷನರಿ ಸಂಸ್ಥೆ, ಶ್ರೀ ಸತ್ಯಸಾಯಿ ಲೋಕಸೇವಾ ಪ್ರಕಾಶನ, ಅಳಿಕೆ, ದಕ್ಷಿಣ ಕನ್ನಡ, ಪು.ಸಂ. 18

6. ಶ್ರೀ ಮಡಿಯಾಲ ನಾರಾಯಣ ಭಟ್, (2011), ಅಧ್ಯಾಪಕರಿಗೆ ದಾರಿದೀಪ, ಶ್ರೀ ಸತ್ಯಸಾಯಿ ಲೋಕಸೇವಾ ಪ್ರಕಾಶನ, ಅಳಿಕೆ, ದಕ್ಷಿಣ ಕನ್ನಡ, ಪು.ಸಂ. 28

## ಪರಾಮರ್ಶನ ಗ್ರಂಥಗಳು:

1. ಕೃಷ್ಣ ಮೂರ್ತಿ ಜೆ., (1953), ಶಿಕ್ಷಣ ಮತ್ತು ಜೀವನ, ಬೆಂಗಳೂರು ಶಿಕ್ಷಣ ಕೇಂದ್ರ, ಬೆಂಗಳೂರು.
2. ಶ್ರೀ ಮಡಿಯಾಲ ನಾರಾಯಣ ಭಟ್, (1972), ಅಧ್ಯಾಪಕ, ಶ್ರೀ ಸತ್ಯಸಾಯಿ ಲೋಕ ಸೇವಾ ಪ್ರಕಾಶನ, ಅಳಿಕೆ.
3. ಶ್ರೀ ಮಡಿಯಾಲ ನಾರಾಯಣ ಭಟ್, (1974), ಭಾರತ ದರ್ಪಣ, ಶ್ರೀ ಸತ್ಯ ಸಾಯಿ ಲೋಕ ಸೇವಾ ಪ್ರಕಾಶನ, ಅಳಿಕೆ.
4. ಶ್ರೀ ಮಡಿಯಾಲ ನಾರಾಯಣ ಭಟ್, (1974), ವಿರಾಟ್ ರೂಪದ ಭಾರತೀಯ ಮಿಷನರಿ ಸಂಸ್ಥೆ, ಶ್ರೀ ಸತ್ಯ ಸಾಯಿ ಲೋಕ ಸೇವಾ ಪ್ರಕಾಶನ, ಅಳಿಕೆ.
5. ಗೋಪಾಲ್ ರಾವ್ ಎ.ವಿ., (1976), ಶಿಕ್ಷಣದಲ್ಲಿ ಮೌಲ್ಯಮಾಪನ, ರವಿಮೂರ್ತಿ ಪ್ರಕಾಶನ, ಮೈಸೂರು.
6. ಭೈರಪ್ಪ ಕೆ., (2008), ಆದರ್ಶ ಶಿಕ್ಷಕರಾಗುವುದು ಹೇಗೆ?, ಸಪ್ನ ಬುಕ್ ಹೌಸ್, ಬೆಂಗಳೂರು.
7. ಶ್ರೀ ಮಡಿಯಾಲ ನಾರಾಯಣ ಭಟ್, (2011), ಭಾರತೀಯ ಸಂಸ್ಕೃತಿ, ಶ್ರೀ ಸತ್ಯ ಸಾಯಿ ಲೋಕ ಸೇವಾ ಪ್ರಕಾಶನ, ಅಳಿಕೆ.

**Funding:**

This study was not funded by any grant.

**Conflict of interest:**

The Authors have no conflict of interest to declare that they are relevant to the content of this article.

**About the License:**

© The Authors 2024. The text of this article is open access and licensed under a Creative Commons Attribution 4.0 International License.